ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

*ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ*

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001

ಸಂಖ್ಯೆ: ವಾಇ : ಉನಿ : ಸುಮಪ : 2014–15 : ಆಗಸ್ಟ್ 4, 2014

ಪತ್ರಿಕಾ ಪ್ರಕಟಣೆ

## *ಮಾಜಿ ಸಚಿವ ಜಿ. ಹೆಚ್. ಅಶ್ವಥ್ ರೆಡ್ಡಿ* ಅವರಿಗೆ
## ಮುಖ್ಯಮಂತ್ರಿ ಅವರಿಂದ ಪುಷ್ಪ ನಮನ, ಗೌರವ ಸಲ್ಲಿಕೆ

ಬೆಂಗಳೂರು, ಆಗಸ್ಟ್ 4 ( ಕರ್ನಾಟಕ ವಾರ್ತೆ) :

ಅನಾರೋಗ್ಯದ ಹಿನ್ನೆಲೆಯಲ್ಲಿ ಭಾನುವಾರ ನಿಧನರಾದ ಮಾಜಿ ಸಚಿವ ಹಾಗೂ ಮಾಜಿ ಶಾಸಕ ಶ್ರೀ ಜಿ. ಹೆಚ್. ಅಶ್ವಥ್ ರೆಡ್ಡಿ ಅವರ ಪಾರ್ಥಿವ ಶರೀರಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರು ಇಲ್ಲಿ ಇಂದು ಪುಷ್ಪ ನಮನ ಅರ್ಪಿಸಿ ಗೌರವ ಸಲ್ಲಿಸಿದರು.

ನಗರದ ಎಂ ಎಸ್ ರಾಮಯ್ಯ ಆಸ್ಪತ್ರೆಗೆ ಬೆಳಿಗ್ಗೆ ಭೇಟಿ ನೀಡಿ ಶ್ರೀ ಅಶ್ವಥ್ ರೆಡ್ಡಿ ಅವರಿಗೆ ಗೌರವ ಸಲ್ಲಿಸಿದ ನಂತರ ಶ್ರೀ ಸಿದ್ಧರಾಮಯ್ಯ ಅವರು ಜಗಳೂರು ಕ್ಷೇತ್ರವನ್ನು ಆರು ಬಾರಿ ಪ್ರತಿನಿಧಿಸಿದ್ದ ಶ್ರೀ ಅಶ್ವಥ್ ರೆಡ್ಡಿ ಅವರ ಸಾಧನೆಯ ಕುರಿತು ಮೆಲುಕು ಹಾಕಿದರು. ಅಲ್ಲದೆ, ಮೃತರ ಕುಟುಂಬದವರೊಡನೆ ದುಃಖ ಹಂಚಿಕೊಂಡರು.

ವಿದೇಶ ಪ್ರವಾಸದಲ್ಲಿರುವ ಶ್ರೀ ಅಶ್ವಥ್ ರೆಡ್ಡಿ ಅವರ ಸಹೋದರರೂ ಆಗಿರುವ ಚಿತ್ರದುರ್ಗ ಶಾಸಕ ಶ್ರೀ ಜಿ. ಹೆಚ್. ತಿಪ್ಪಾರೆಡ್ಡಿ ಅವರು. ಅಮೇರಿಕಾದಿಂದ ಹಿಂದಿರುಗಿದ ನಂತರ ಆಗಸ್ಟ್ 6 ರಂದು ಬುಧವಾರ ಚಿತ್ರದುರ್ಗದಲ್ಲಿ ಶ್ರೀ ಅಶ್ವಥ್ ರೆಡ್ಡಿ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಅವರ ಕುಟುಂಬ ಮೂಲಗಳು ತಿಳಿಸಿವೆ.

********

ಡಿ ಪಿ ಎಂ